# ಹಬ್ಬಗಳು ಮತ್ತು ನಂಬಿಕೆಗಳು



ಗಣೇಶನ ಹಬ್ಬ ಬಂತು, ಹೋಯ್ತು; ಆದರೆ ಅದಕ್ಕೆ ಸಂಬಂಧಿತವಾದ ಮೂಢನಂಬಿಕೆ ಮಾತ್ರ ಹಾಗೆಯೇ ಉಳಿಯಿತು.

ವೇದಕಾಲದ ನಂತರ ನಮ್ಮಲ್ಲಿ ಪುರಾಣಗಳು, ಪುಣ್ಯಕಥೆಗಳು ಹುಟ್ಟಿಕೊಂಡವು. ಕಥೆ ಎಂದರೆ ಕಥೆಯೇ, ಪ್ರತಿಯೊಬ್ಬ ಕಥೆಗಾರನಿಗೂ ತನ್ನದೆ ಆದ ಕಲ್ಪನೆಗಳನ್ನು ಹೊಂದುವ ಹಕ್ಕಿದೆ. ಅಂತೆಯೇ ಗಣೇಶನ ಕಥೆ ಬರೆದವರು ಅವನ ಹೊಟ್ಟೆ ಒಡೆದುದನ್ನು ಕಂಡು ನಕ್ಕ ಚಂದ್ರನನ್ನು ಚೌತಿಯಂದು ನಿನ್ನ ಮುಖ ನೋಡಿದವರಿಗೆ ಇಲ್ಲಸಲ್ಲದ ಅಪವಾದಗಳು ಒದಗಲಿ ಎಂದು ಶಾಪ ನೀಡಿದ ಎಂದು ಬರೆದರು.

### ಆದರೆ ಅದು ನಿಜವೇನು?

ನಮ್ಮ ಸಂಪ್ರದಾಯದಲ್ಲಿಯೇ ಇಂದಿನ ದಿನಗಳಲ್ಲಿ ಈ ಕಥೆಯನ್ನು ಓದಿರುವವರು ವಿರಳ. ಇತರ ಸಂಪ್ರದಾಯ, ಮತಗಳ ಜನರಿಗೆ ಇದು ತಿಳಿದೂ ಇರುವುದಿಲ್ಲ. ಪೂರ್ಣಚಂದ್ರನನ್ನು (ಅಥವಾ ಚೌತಿ ಚಂದ್ರನನ್ನು) ಅಯಾಚಿತವಾಗಿ ಇತರ ಸಂಪ್ರದಾಯಗಳವರು, ಕಥೆ ತಿಳಿಯದವರು, ಎಲ್ಲರೂ ನೋಡಿರುತ್ತಾರೆ. ಆದರೆ ಚಂದ್ರನನ್ನು ನೋಡಿದರೆ ಕೇಡು ಎಂದು ನಂಬಿದವರು ಮಾತ್ರ ತಮ್ಮ ಮನಸ್ಸನ್ನು ಕೆಡಿಸಿಕೊಂಡು ಸಣ್ಣಸಣ್ಣ ಮಾತುಗಳನ್ನೂ ಅಪವಾದ ಎಂದು ಕಲ್ಪಿಸಿಕೊಂಡು ಖಿನ್ನರಾಗುವುದೇ ಹೆಚ್ಚು. ಚೌತಿಚಂದ್ರನ ಬಗ್ಗೆ ಅರಿಯದವರು ನೆಮ್ಮದಿಯಾಗಿಯೇ ಇರುತ್ತಾರೆ.

ಮತ್ತೊಂದು ಪುರಾಣದ ಕಥೆಯನ್ನೇ ತೆಗೆದುಕೊಳ್ಳಿ! ಶ್ರೀಕೃಷ್ಣನು ಚೌತಿಯ ಚಂದ್ರನನ್ನು ಕಂಡದ್ದರಿಂದ ಹಲವಾರು ಅಪವಾದಗಳನ್ನು ಎದುರಿಸಬೇಕಾಯಿತಂತೆ. ಆದರೆ, ನಂತರ? ಶಮಂತಕ ಮಣಿಯನ್ನು ಹುಡುಕಿ ಹೊರಟ ಕೃಷ್ಣನಿಗೆ ಶಮಂತಕ ಮಣಿ, ಮತ್ತು ಎರಡು ಹೆಂಡತಿಯರು – ಸತ್ಯಭಾಮೆ ಮತ್ತು ಜಾಂಬವತಿ ದೊರೆತರು! ಚೌತಿಚಂದ್ರನನ್ನು ನೋಡಿದ್ದರಿಂದ ಡೌರಿಯಾಗಿ ಮಣಿ, ಡಬ್ಬಲ್ ಹೆಂಡತಿಯರ ಯೋಗ! ಗಣೇಶನಿಗೆ ಸಿಂಗಲ್ ಹೆಂಡತಿಯೂ ಇಲ್ಲದಿರುವಾಗ ಗಣೇಶನ ಶಾಪದಿಂದ ಡಬ್ಬಲ್ ಹೆಂಡತಿಯರು, ಆಸ್ತಿ ದೊರೆತರೆ ಬೇಡ ಎನ್ನುವವರೇನು? ಅಪಾರ್ಟ್‌ಮೆಂಟ್‌ಗಳಲ್ಲಿ ಟೆರೇಸ್‌ಗೆ ಹೋಗಿ ಚಂದ್ರನನ್ನು ನೋಡಲು ವರಗಳ ನೂಕುನುಗ್ಗಲು ಉಂಟಾದೀತು!

ಗಣೇಶನ ಬಗ್ಗೆ ಮತ್ತಷ್ಟು ನಂಬಿಕೆಗಳೂ ಇವೆ. ಅವನ ಸೊಂಡಿಲು ಬಲಕ್ಕೆ ಇದ್ದರೆ ಶ್ರೇಷ್ಠ, ಎಡಕ್ಕೆ ಇದ್ದರೆ ಸಾಧಾರಣ ಎಂಬ ನಂಬಿಕೆ ಉಂಟು. ವಿಗ್ರಹ ತಯಾರಿಸಿದವನೇ ಗಣೇಶನ ಸೊಂಡಿಲಿನ ಸ್ಥಾನವನ್ನೂ ನಿರ್ಧರಿಸುತ್ತಾನೆ ಎಂಬ ಸಾಮಾನ್ಯ ತಿಳುವಳಿಕೆಯೂ ಇಲ್ಲದಂತೆ ಜನರು ವರ್ತಿಸುವುದು ನಿಜಕ್ಕೂ ಆಶ್ಚರ್ಯಕರ. ಗಣೇಶನನ್ನು ಬಿಡುವುದಕ್ಕೂ ಒಂದು ದಿನವನ್ನು ನಿಗದಿಪಡಿಸಿಯೇ ಬಿಡುತ್ತಾರೆ. ಅನಿಗದಿತ ದಿನದಲ್ಲಿ ಬಿಟ್ಟರೆ ಅಶುಭ ಎಂಬ ನಂಬಿಕೆಯೂ ಇದೆ. ಕಾಲಾತೀತನಾದ ದೇವನಿಗೆ ಕಾಲದ ಕೋಳ! ದೇವ ಸರ್ವಜ್ಞ ಮತ್ತು ಸರ್ವಾಂತರ್ಯಾಮಿ ಎಂದು ತಿಳಿದೂ, ಭಕ್ತರ ಕಷ್ಟನಷ್ಟಗಳನ್ನು ಅವನು ಅರ್ಥ ಮಾಡಿಕೊಳ್ಳಲಾರ, ಇಂತಿಷ್ಟು ದಿನ ಇಟ್ಟುಕೊಳ್ಳದಿದ್ದರೆ ಶಾಪ ನೀಡುತ್ತಾನೆ ಅಥವಾ ಅಶುಭ ಉಂಟಾಗುತ್ತದೆ ಎಂಬುದು ಕೇವಲ ಮನಸ್ಸಿನ ಭ್ರಮೆಯಷ್ಟೆ.

ಸತ್ಯನಾರಾಯಣನ ಪೂಜೆಯದಂತೂ ಇದ್ದಿದ್ದೂ ಸರಿ! ಯಾರೋ ತನ್ನ ಪೂಜೆ ಮಾಡಲಿಲ್ಲವೆಂದು ಅವಳ ಗಂಡನ ಹಡಗನ್ನು ಸತ್ಯನಾರಾಯಣನು ಮುಳುಗಿಸಿಬಿಟ್ಟನು ಎಂಬ ರೀತಿಯಲ್ಲಿ ಆ ಕಥೆ ಹೆಣೆಯಲ್ಪಟ್ಟಿದೆ. ಧರ್ಮಸ್ಥಳದ ಮಂಜುನಾಥ, ಕಟೀಲಿನ ದುರ್ಗಿ, ಇತ್ಯಾದಿ ದೇವತೆಗಳ ಪೂಜೆ ಮಾಡದಿದ್ದರೆ ನಿಮಗೆ ಕೇಡು ಉಂಟಾಗುತ್ತದೆ ಎಂಬ ಕಾಗದಗಳೂ ನಿಮ್ಮನ್ನು ಆಗಾಗ್ಗೆ ತಲುಪಿರಬಹುದು. ಇಂದಿನ ದಿನಗಳಲ್ಲಿ ಇಂಟರ್‌ನೆಟ್‌ನಲ್ಲೂ ಇಂತಹ ಭಯೋತ್ಪಾದಕ ಸಂದೇಶಗಳು ಬಿತ್ತರವಾಗುತ್ತವೆ. ಇದನ್ನು ನಂಬಿದ ಜನರು ಸಾಲವನ್ನು ಮಾಡಿಯಾದರೂ ಈ ಸ್ಥಳಗಳಿಗೆ ಹೋಗಿಬರುತ್ತಾರೆ.

ದೇವನಿದ್ದಾನೆ ಎಂಬುದು ಒಂದು ಸುಂದರ ಕಲ್ಪನೆ. ಅವನು ಸರ್ವಶಕ್ತ ಎಂಬುದು ಮನಸ್ಸಿಗೆ ನೆಮ್ಮದಿ ನೀಡುವ ಅಂಶ. ಅಂತಹ ದೇವನನ್ನು ನೋಡಲು ಹೋಗದ ಭಕ್ತನಿಗೆ ಕೇಡಾಗುತ್ತದೆ, ಅಯ್ಯಪ್ಪನಂತಹ ದೇವರ ದೇವಸ್ಥಾನದಲ್ಲಿ ಹೆಣ್ಣು ಹೋದರೆ ದೇಗುಲವೇ ಮಲಿನವಾಗುತ್ತದೆ, ದೇವನು ಕೋಪ ಮಾಡಿಕೊಂಡರೆ ಪ್ರಳಯವೇ ಆಗುತ್ತದೆ ಎನ್ನುವುದೆಲ್ಲಾ ನಿರಾಧಾರ ಹಾಗೂ ಜನರಲ್ಲಿ ಭಯದ ಮೂಲಕ ಭಕ್ತಿ ಮೂಡಿಸಿ ತನ್ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳುವವರು ನಡೆಸುವ ಹುನ್ನಾರ.

### ಹಾಗಿದ್ದರೆ ನಾವು ಮಾಡಬೇಕಾದುದಾದರೂ ಏನು?

ಇಡೀ ಜಗತ್ತು ದೇವನದು ಎಂಬ ನಂಬಿಕೆ ಇದೆ. ಹಾಗಿರುವಾಗ ಅವನ ವಸ್ತುವನ್ನು ಅವನೇ ಹಾಳುಮಾಡಿಕೊಳ್ಳುವಷ್ಟು ದಡ್ಡನಲ್ಲ ದೇವ. ಇನ್ನು ಇಲ್ಲಿನ ಹಣ್ಣು, ಹೂ, ಗರಿಕೆ ಎಲ್ಲವೂ ಅವನದೇ ಆಗಿರುವಾಗ ಅದನ್ನೇ ಅವನಿಗೆ, ದುಬಾರಿ ಬೆಲೆಯಲ್ಲಿ ಕೊಂಡು, ಅರ್ಪಿಸುವುದು ವಿಹಿತವೇನಲ್ಲ! ಆಡಂಬರದ ಪೂಜೆಯನ್ನು ಹೊರತುಪಡಿಸಿ, ಮಂತ್ರದಲ್ಲೇ ಪೂಜೆಗಳನ್ನು ಮಾಡಬಹುದು. ಬೆಳಗೆರೆ ಕೃಷ್ಣಶಾಸ್ತ್ರಿಗಳನ್ನು ಸುವರ್ಣಪುಷ್ಪವನ್ನು ದಾನ ಮಾಡಬೇಕೆಂದಿದ್ದಾರೆ, ಏನು ಮಾಡಲಿ? ಎಂದೊಬ್ಬ ಬಡವ ಕೇಳಿದಾಗ ಸುವರ್ಣಪುಷ್ಪ ಎಂದರೆ ಚಿನ್ನದ ಹೂ ಎಂದೇನಲ್ಲ; ಒಳ್ಳೆಯ ಬಣ್ಣಗಳನ್ನುಳ್ಳ, ನೋಡಲು ಅಂದವಾದ ಹೂಗಳು ಎಂದಷ್ಟೆ. ತೊಗೊ, ಹೋಗಿ ಪೂಜೆ ಮಾಡು ಎಂದು ಅಲ್ಲಿನ ಗಿಡಗಳಲ್ಲಿದ್ದ ಹೂಗಳನ್ನೇ ಕಿತ್ತುಕೊಟ್ಟಿದ್ದರಂತೆ!

ಪೂಜೆ ಮನೆಗೆ ಹಾಗೂ ಮನಸ್ಸಿಗೆ ಹಿತಕರವಾಗಿರಬೇಕು, ಪೂಜೆಯಿಂದ ಸಾಲ ಮಾಡುವ ಪರಿಸ್ಥಿತಿ ಒದಗಬಾರದು. ಅಂತಹ ಪರಿಸ್ಥಿತಿ ಒದಗಿದರೆ ದೇವನನ್ನು ಅಯ್ಯೋ, ಪೂಜಿಸಬೇಕಲ್ಲಾ ಎಂದು ಪೂಜಿಸಬೇಕಾಗುತ್ತದೆ. ಯಾವುದೇ ದೇವನು ಭಯೋತ್ಪಾದಕನಲ್ಲ, ನಮ್ಮ ಮಿತಿ ಮೀರಿ ಹಬ್ಬ ಮಾಡುವುದು ಖಂಡಿತ ಅನಗತ್ಯ. ಹೆಬ್ಬೆಟ್ಟು ಒತ್ತಿ, ಒಬ್ಬಟ್ಟು ಮಾಡಬೇಡ ಎನ್ನುತ್ತಾರೆ ನಾ. ಕಸ್ತೂರಿ! ಗಣೇಶನಿರಲಿ, ಅನಂತನಿರಲಿ, ದುರ್ಗೆಯಿರಲಿ ಭಕ್ತಿಯ ಮನ, ಸರಳ ಜೀವನ ಎರಡಿದ್ದರೆ ಜೀವನ ಸುಗಮ ಎಂದು ಅರಿತರೆ ಮನಕ್ಕೆ ಹಿತ, ಜೀವನಕ್ಕೆ ಆರಾಮ. ಇಲ್ಲವಾದರೆ ಅನಗತ್ಯ ಕಿರಿಕಿರಿ, ಸಾಲಗಳ ಹೆದ್ದಾರಿ!

■ ವೈ–ಚಾರಿ